# ದಾನವೆಂಬ ಧರ್ಮ

ಶಶಿಕಲಾ ಶ್ರೀಧರ್

ಹಲವು ಧಾರ್ಮಿಕ ಆಚರಣೆಗಳಂತೆ, ಒಂದು ಮುಖ್ಯವಾದ ಪುಣ್ಯಕಾರ್ಯವೇ ದಾನ. ನಮ್ಮ ಸಂಸ್ಕೃತಿಯಲ್ಲಿ ದಾನಧರ್ಮವು ಪಡೆದಿರುವ ಸ್ಥಾನ, ಅದರ ಹಿನ್ನೆಲೆ ಹಾಗೂ ಮಹತ್ವಗಳನ್ನು ಇಲ್ಲಿ ವಿವರಿಸಲಾಗಿದೆ. ಲೇಖಕಿ, ಬೆಂಗಳೂರು ರಾಮಕೃಷ್ಣ ಮಠದ ಭಕ್ತರು. ಅವರು ಸಂಸ್ಕೃತ, ಸಂಗೀತ ಕ್ಷೇತ್ರಗಳಲ್ಲಿ ಪರಿಣತರು. ಅವರ ಅನೇಕ ಲೇಖನಗಳು 'ವಿವೇಕ ಪ್ರಭ'ದಲ್ಲಿ ಪ್ರಕಟವಾಗಿವೆ.

'ದಾನ' ಎಂಬ ಶಬ್ದ ಉದಾರತೆಯ ಪ್ರತೀಕ, ಸದ್ಗುಣ ದ್ಯೋತಕ. ಹಿಂದೂ, ಬೌದ್ಧ, ಜೈನ, ಸಿಖ್ ಧರ್ಮಗಳಲ್ಲಿ ದಾನ ಎಂಬುದು ಉದಾರತೆಯನ್ನು ಬೆಳೆಸಿಕೊಳ್ಳಲು ಮಾಡಬೇಕಾದ ಧರ್ಮಕಾರ್ಯ. ಅತ್ಯಂತ ಆವಶ್ಯಕತೆ ಇರುವವನಿಗೆ ಮಾಡುವ ಸಹಾಯ ವ್ಯಕ್ತಿಗತ 'ದಾನ'. ಇದರಂತೆಯೇ ಸಂಸ್ಥೆಯ ಮೂಲಕ ಮಾನವ ಕಲ್ಯಾಣಕ್ಕಾಗಿ ಮಾಡುವ ಕಾರ್ಯಗಳನ್ನೂ 'ದಾನ' ಎಂದೇ ಕರೆಯಬಹುದು.

ವೇದದ ಕಾಲದಿಂದಲೂ ಪ್ರಚಲಿತವಿರುವ ವಿದ್ಯಮಾನ ದಾನ. ಇದರ ಇತರ ನಾಮರೂಪಗಳು ಪರೋಪಕಾರ, ಕಷ್ಟದಲ್ಲಿರುವವರಿಗೆ ನಾವು ನೀಡುವ ಸಹಾಯಹಸ್ತ, ದಕ್ಷಿಣೆ, ತಮ್ಮ ತಮ್ಮ ಯೋಗ್ಯತೆಗನುಸಾರವಾಗಿ ನೀಡುವ ಕಾಣಿಕೆ ; ಧನ ಅಥವಾ ದ್ರವ್ಯ, ಹಸಿದವರಿಗೆ ನೀಡುವ ಭಿಕ್ಷೆ ಮುಂತಾದವು.


ಆದರೆ ನಿಜವಾದ 'ದಾನ' ಎಂದರೆ ನಮ್ಮ ವಸ್ತು ಎಂದು ನಾವು ಪರಿಗಣಿಸಲ್ಪಟ್ಟು ಶೇಖರಿಸಿರುವ ಧನ ಧಾನ್ಯಗಳನ್ನು ಅದರ ಅಗತ್ಯವಿರುವವರಿಗೆ, ಪ್ರತಿಫಲಾಪೇಕ್ಷೆ ಇಲ್ಲದೆ ನೀಡುವುದು.

## ಭಾರತೀಯ ವೇದ, ಶಾಸ್ತ್ರ, ಪುರಾಣಾದಿಗಳಲ್ಲಿ 'ದಾನ'

**ವೇದದಲ್ಲಿ :** ಪ್ರಥಮವಾಗಿ ಋಗ್ವೇದದಲ್ಲಿ ದಾನದ ವಿಚಾರವಾಗಿ ಕಷ್ಟದಲ್ಲಿರುವವರಿಗೆ ದಾನ ನೀಡದವನ ಮನಸ್ಸಿನಲ್ಲಿ ಉಂಟಾಗುವ ಪಾಪಭೀತಿಯ ಕುರಿತಾಗಿ ಒಂದು ಮಂತ್ರವಿದೆ.

ಋಗ್ವೇದದ ೧೧೭ ನೇ ಸೂಕ್ತದ ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಧನದಾನ ಮತ್ತು ಅನ್ನದಾನಗಳ ಪ್ರಶಂಸೆಯಿದೆ. ದೇವತೆಗಳಿಂದ ಮಾನವ ಸೃಷ್ಟಿಯಾದದ್ದು ಹಸಿವಿನಿಂದ ಮರಣಹೊಂದುವುದಕ್ಕಲ್ಲ. ಅನ್ನವಿಲ್ಲದೆ ಕೃಶನಾಗಿ ಮನೆಯ ಮುಂದೆ ಯಾಚಿಸುವ ಭಿಕ್ಷುಕನಿಗೆ ಅನ್ನ ನೀಡುವ ದಾನಿಗೆ ಯಜ್ಞಮಾಡಿದ ಫಲಪ್ರಾಪ್ತಿಯಾಗುವುದು.

ಅನ್ನದಾನದ ವಿಷಯದಲ್ಲಿ ಶತ್ರುಗಳೂ ಮಿತ್ರರಾಗುತ್ತಾರೆ. ಧನವುಳ್ಳವರು ಯಾಚಕ ಅತಿಥಿಗೆ ದಾನ ನೀಡಿದರೆ ಉತ್ತರೋತ್ತರ ಅಭಿವೃದ್ಧಿ ಉಂಟಾಗುತ್ತದೆ. ಅನ್ನದಾನ ಮಾಡದ ಮನುಷ್ಯನ ಧನವು ವ್ಯರ್ಥ. ಯಾಚಕ ಅತಿಥಿಗೆ ಅನ್ನ ನೀಡದೆ, ಅನ್ನದಾನ ಮಾಡುವ ಮುನ್ನವೇ ಊಟಮಾಡುವವರು ಪಾಪಿಷ್ಠರಾಗುತ್ತಾರೆ. ಆದ್ದರಿಂದ ದಾನ ಮಾಡದ ಲೋಭಿಯು ದಾನ ಮಾಡುವವನ ಗುಣವನ್ನು ಪಡೆದು ಅವನನ್ನು ಅನುಸರಿಸಬೇಕು. ಕಾರಣ ದಾನಮಾಡದವನಿಗೆ ಯಾರಿಂದಲೂ ಯಾವ ಸಹಾಯವೂ ದೊರೆಯದು. ಅಂತಹವರ ಬಗ್ಗೆ ಯಾರೂ ಕನಿಕರಿಸುವುದಿಲ್ಲ ಹಾಗೂ ಅವರಿಗೆ ಸುಖವನ್ನು ಬಯಸುವುದೂ ಇಲ್ಲ. ಧನವು ರಥಚಕ್ರದಂತೆ ಒಂದೆಡೆ ನಿಲ್ಲದೆ ಒಬ್ಬರಿಂದೊಬ್ಬರಿಗೆ ಸೇರುತ್ತಾ ಹೋಗುತ್ತದೆ. ಆದ್ದರಿಂದ ನಮಗೆ ಈ ಪುಣ್ಯಾವಕಾಶ ದೊರೆತಾಗ ನಾವು ಕೊಟ್ಟು ಜೀವಿಸಬೇಕು.



## ಉಪನಿಷತ್ತುಗಳಲ್ಲಿ : 'ದಾಮ್ಯತ-ದತ್ತ-ದಯಧ್ವಂ'

ಬೃಹದಾರಣ್ಯಕೋಪನಿಷತ್ತಿನಲ್ಲಿ ಒಂದು ಕಥೆ ಇದೆ. ದೇವತೆಗಳು, ಮನುಷ್ಯರು ಮತ್ತು ಅಸುರರು ಎಂಬ ಮೂರುವರ್ಗದ ಪ್ರಜಾಪತಿಯ ಮಕ್ಕಳು ತಮ್ಮ ತಂದೆಯಾದ ಪ್ರಜಾಪತಿಯ ಬಳಿಯಲ್ಲಿ ಬ್ರಹ್ಮಚರ್ಯವಾಸ ಮಾಡಿದರು. ಬ್ರಹ್ಮಚರ್ಯವಾಸ ಮುಗಿಯುತ್ತಲೇ ದೇವತೆಗಳು ಬ್ರಹ್ಮನ ಬಳಿಗೆ ಹೋಗಿ ಸಂದೇಶವೊಂದನ್ನು ಅಪೇಕ್ಷಿಸಿದರು. ಬ್ರಹ್ಮನು ದೇವತೆಗಳನ್ನು ಕುರಿತು 'ದ' ಎಂದನು. ದೇವತೆಗಳು ಆ ಒಂದು ಅಕ್ಷರದಿಂದಲೇ **ದಾಮ್ಯತ** ಎಂದು ಅರ್ಥಮಾಡಿಕೊಂಡರು. ಕಾರಣ ಭೋಗಾಸಕ್ತರಾದ ದೇವತೆಗಳು ಮನಸ್ಸನ್ನು ದಮನ ಮಾಡಬೇಕು ಎಂಬುದು ತಾತ್ಪರ್ಯವಾಗಿತ್ತು. ಇದರಂತೆಯೇ ಮನುಷ್ಯರೂ ಬ್ರಹ್ಮನ

ಸಂದೇಶವನ್ನು ಅಪೇಕ್ಷಿಸಿದಾಗ ಬ್ರಹ್ಮ ಅವರಿಗೂ 'ದ' ಎಂದೇ ಉತ್ತರಿಸಿದ. ಮನುಷ್ಯರು ಬ್ರಹ್ಮದೇವರು **ದತ್ತ** ಎಂದು ಹೇಳಿದ ರೆಂದು ಅರ್ಥಮಾಡಿಕೊಂಡರು. ಕಾರಣ ಲೋಭಿಗಳಾದ ಮನುಷ್ಯರು ದಾನ ಮಾಡಬೇಕು. ಕಡೆಯದಾಗಿ ಅಸುರರೂ ಬ್ರಹ್ಮನನ್ನು ಕುರಿತು ಸಂದೇಶವನ್ನು ಕೇಳಿದಾಗ, ಬ್ರಹ್ಮ ಅವರಿಗೂ 'ದ' ಎಂದೇ ಉತ್ತರಿಸಿದ. ಅಸುರರು ಈ ದಕಾರವನ್ನು **ದಯಧ್ವಂ** – ದಯಾವಂತರಾಗಿರಿ ಎಂಬುದು ಬ್ರಹ್ಮನ ಸಂದೇಶವೆಂದು ಅರಿತರು. ಕಾರಣ ಕ್ರೂರಿಗಳಾದ ಅಸುರರು ದಯಾಪರರಾಗಬೇಕು ಎಂಬುದು ತಾತ್ಪರ್ಯ.



ಯಯಾತಿ

## ಮಹಾಭಾರತದಲ್ಲಿ

ಮಹಾಭಾರತದ ಆದಿಪರ್ವದಲ್ಲಿ ಯಯಾತಿಯು ಸ್ವರ್ಗಾರೋಹಣ ಮಾಡಿದ ನಂತರ ಇಂದ್ರನು ಅವನು ಭೂಲೋಕದಲ್ಲಿ ಅವನ ಮಗ ಪುರುವಿಗೆ ನೀಡಿದ ಉಪದೇಶವನ್ನು ಕೇಳಲು ಅಪೇಕ್ಷಿಸುತ್ತಾನೆ. ಯಯಾತಿಯು ರಾಜನಾದವನು ಅನುಸರಿಸಬೇಕಾದ ಹಲವಾರು ನೀತಿಗಳನ್ನೂ, ಹಿತೋಕ್ತಿಗಳನ್ನು ತಾನು ತನ್ನ ಮಗನಿಗೆ ಹೇಳಿದುದಾಗಿ ಅವುಗಳನ್ನು ವಿವರಿಸುತ್ತಾನೆ : ರಾಜನಿಗಿರಬೇಕಾದ ಮುಖ್ಯ ಗುಣಗಳೆಂದರೆ ದಯೆ, ಮೈತ್ರಿ, ದಾನ ಮತ್ತು ಮಧುರವಾಣಿ. ಇವು ರಾಜನಲ್ಲಿ ಮಾತ್ರವಲ್ಲ ಸಕಲರಲ್ಲಿಯೂ ಇರಬೇಕಾದ ಉತ್ತಮ ಗುಣಗಳು. ಮಧುರವಾಕ್ಯ, ಸಕಲರೊಡನೆ ಮೈತ್ರಿ, ದೀನದಲಿತರಿಗೆ ದಾನ ನೀಡುವುದು, ಸಕಲ ಜೀವಿಗಳಲ್ಲೂ ದಯೆ ಇವು ಅತ್ಯುತ್ತಮ ಗುಣಗಳು. ರಾಜನಾದವನು ಯಾವಕಾರಣದಿಂದಲೂ ಯಾಚನೆ ಮಾಡಬಾರದು ಎಂಬುದೂ ಮುಖ್ಯ.

ಇದಲ್ಲದೆ ಮಹಾಭಾರತದ ಅನುಶಾಸನಪರ್ವದಲ್ಲಿ ಭೀಷ್ಮ ಪಿತಾಮಹನು ಯುಧಿಷ್ಠಿರನಿಗೆ ಐದು ಬಗೆಯ ದಾನದ ವಿಚಾರವನ್ನು ತಿಳಿಸುತ್ತಾರೆ.

## ಐದು ಬಗೆಯ ದಾನ

**೧. ಧರ್ಮಮೂಲವಾದ ದಾನ :** 'ದಾನಿಯು ಇಲ್ಲಿ ಕೀರ್ತಿಯನ್ನು ಹೊಂದುತ್ತಾನೆ, ಪರಲೋಕದಲ್ಲಿಯೂ ಶ್ರೇಷ್ಠವಾದ ಸುಖವನ್ನು ಅನುಭವಿಸುತ್ತಾನೆ' ಎಂಬ ಭಾವನೆಯೊಂದಿಗೆ ದೋಷದೃಷ್ಟಿ ಇಲ್ಲದೆ ಎಂದರೆ ಅಸೂಯಾರಹಿತನಾಗಿ ಬ್ರಾಹ್ಮಣರಿಗೆ ಮಾಡುವ ದಾನವು ಧರ್ಮಮೂಲದಾನ.

**೨. ಅರ್ಥಮೂಲವಾದ ದಾನ :** 'ಇವನು ದಾನ ಮಾಡುತ್ತಾನೆ','ಇವನು ಮುಂದೆ ದಾನ ಕೊಡುವವನಿದ್ದಾನೆ', 'ಇವನು ನನಗೆ ಇಂತಹ ದಾನವನ್ನು ಕೊಟ್ಟನು' ಎಂಬುದಾಗಿ ದಾನಿಯ ಕೀರ್ತನವನ್ನು ಯಾಚಕರು ಮಾಡುತ್ತಿರುವುದನ್ನು ಕೇಳಿ, ತನ್ನ ಕೀರ್ತಿಯನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ, ಯಾಚಕನಾಗಿ ಬಂದವನಿಗೆ ತನ್ನಲ್ಲಿರುವ ಸರ್ವಸ್ವವನ್ನೂ ಕೊಟ್ಟುಬಿಡುವುದು ಅರ್ಥಮೂಲದಾನ.

**೩. ಭಯಮೂಲವಾದ ದಾನ :** 'ನಾನು ಇವನಿಗೆ ಸಂಬಂಧಿಸಿದವನೂ ಅಲ್ಲ; ಇವನು ನನ್ನವನೂ ಅಲ್ಲ. ಆದರೂ ಇವನಿಗೇನಾದರೂ ಕೊಡದಿದ್ದರೆ ಇವನು ಅದನ್ನೇ ಅನಾದರಣೆಯೆಂದು ಭಾವಿಸಿ ನನಗೆ ಅನಿಷ್ಟವನ್ನು ಮಾಡಿಯಾನು' ಎಂಬ ಭಯದಿಂದಲೇ ಮೂಢನಾದವನೊಬ್ಬನಿಗೆ ಪಂಡಿತನು ದಾನ ಮಾಡುತ್ತಾನೆ. ಇದು ಭಯಮೂಲವಾದ ದಾನ.

**೪. ಕಾಮನಾಮೂಲವಾದ ದಾನ :** 'ಇವನು ನನಗೆ ಪ್ರಿಯನಾಗಿದ್ದಾನೆ, ನಾನು ಇವನಿಗೆ ಅತ್ಯಂತ ಪ್ರಿಯನಾಗಿದ್ದೇನೆ' ಎಂಬುದನ್ನು ವಿಚಾರಮಾಡಿ, ಬುದ್ಧಿವಂತನಾದವನು ಯಾವ ವಿಧವಾದ ಆಲಸ್ಯವೂ ಇಲ್ಲದೆ ಇಲ್ಲಿ ಪ್ರಸನ್ನತೆಯಿಂದ ತನ್ನ ಮಿತ್ರನಿಗೆ ದಾನ ಮಾಡುತ್ತಾನೆ. ಇದು ಕಾಮನಾಮೂಲವಾದ ದಾನ.

**೫. ಕರುಣಾಮೂಲವಾದ ದಾನ :** 'ಈತನು ಹೆಚ್ಚು ಬಡವನಾಗಿ ಯಾಚನೆಯನ್ನು ಮಾಡುತ್ತಿದ್ದಾನೆ, ಅಲ್ಪವಾದ ದಾನದಿಂದಲೇ ಸಂತುಷ್ಟನಾಗುತ್ತಾನೆ' ಹೀಗೆ ಭಾವಿಸಿಕೊಂಡು ಕರುಣೆಯಿಂದ ದರಿದ್ರನಿಗೆ ದಾನ ಮಾಡುತ್ತಾನೆ. ಇದು ಕರುಣಾಮೂಲವಾದ ದಾನ.

ಇದೇ ಪರ್ವದಲ್ಲಿ ಮತ್ತೊಮ್ಮೆ ಮಹಾಮಹಿಮ ಭೀಷ್ಮರಿಗೂ ಯುಧಿಷ್ಠಿರನಿಗೂ ದಾನಕ್ಕೂ ಸತ್ಕಾರಕ್ಕೂ ಯಾರು ಪಾತ್ರರು? ಎಂಬ ವಿಚಾರದ ಬಗ್ಗೆ ನಡೆದ ಸಂಭಾಷಣೆ ಹೀಗಿದೆ :

**ಯುಧಿಷ್ಠಿರ : ಕೀದೃಶಾಃ ಸಾಧವೋ ವಿಪ್ರಾಃ ಕೇಭ್ಯೋ ದತ್ತಂ ಮಹಾಫಲಮ್ । ಕೀದೃಶಾನಾಂ ಚ ಭೋಕ್ತವ್ಯಂ ತನ್ಮೇ ಬ್ರೂಹಿ ಪಿತಾಮಹ ॥**

'ಪಿತಾಮಹ, ಎಂತಹ ಬ್ರಾಹ್ಮಣರನ್ನು ಶ್ರೇಷ್ಠ ಬ್ರಾಹ್ಮಣರೆಂದು ತಿಳಿಯಬೇಕು? ಯಾರಿಗೆ ಕೊಡುವ ದಾನವು ಮಹಾಫಲಪ್ರದವಾಗುತ್ತದೆ? ಎಂತಹವರಿಗೆ ಭೋಜನ ಮಾಡಿಸಬೇಕು? ಈ ಎಲ್ಲ ವಿಷಯಗಳನ್ನು ಹೇಳು.'

**ಭೀಷ್ಮ:** ''ಕೋಪವಿಲ್ಲದವರಾಗಿಯೂ, ಧರ್ಮಪರಾಯಣರಾಗಿಯೂ, ಸತ್ಯನಿಷ್ಠರಾಗಿಯೂ ಇದ್ದು, ಇಂದ್ರಿಯನಿಗ್ರಹವಿರುವ ಬ್ರಾಹ್ಮಣರಿಗೆ ಕೊಟ್ಟ ದಾನವು ಮಹಾಫಲದಾಯಕವಾಗುತ್ತದೆ.

''ದುರಭಿಮಾನರಹಿತರು, ದೃಢನಿಶ್ಚಯವುಳ್ಳವರು, ಸಕಲ ಪ್ರಾಣಿಗಳ ಹಿತದಲ್ಲಿಯೂ ಆಸಕ್ತರಾದ, ಎಲ್ಲರನ್ನು ಮಿತ್ರರಂತೆ ಕಾಣುವ ಸದ್ವಿಪ್ರರಿಗೆ ಕೊಟ್ಟ ದಾನವು ಮಹಾಫಲದಾಯಕವಾಗುತ್ತದೆ.

''ಉತ್ತಮಪ್ರಜ್ಞೆ, ಶಾಸ್ತ್ರಜ್ಞಾನ, ಸದಾಚಾರ ಮತ್ತು ಸೌಶೀಲ್ಯವುಳ್ಳವನಿಗೆ ದಾನ ನೀಡಿದಾಗ ಅವನು ದಾನಕೊಟ್ಟವನ ಕುಲವನ್ನೇ ಉದ್ಧಾರಮಾಡುತ್ತಾನೆ.''

### ಭಗವದ್ಗೀತೆಯಲ್ಲಿ

ಇನ್ನು ಮಹಾಭಾರತದ ಪ್ರಮುಖ ಗೀತೆ ಭಗವದ್ಗೀತೆಯ **ಶ್ರದ್ಧಾತ್ರಯವಿಭಾಗಯೋಗ**ದಲ್ಲಿ ಶ್ರೀಕೃಷ್ಣ ಪರಮಾತ್ಮನು ಅರ್ಜುನನಿಗೆ ಮೂರು ಬಗೆಯ ದಾನವನ್ನು ಹೀಗೆ ವರ್ಣಿಸುತ್ತಾನೆ :

*ಸಾತ್ತ್ವಿಕ ದಾನ :*

**ದಾತವ್ಯಮಿತಿ ಯದ್ದಾನಂ ದೀಯತೇಽನುಪಕಾರಿಣೇ ।**
**ದೇಶೇ ಕಾಲೇ ಚ ಪಾತ್ರೇ ಚ ತದ್ದಾನಂ ಸಾತ್ತ್ವಿಕಂ ಸ್ಮೃತಮ್ ॥ ೨೦॥**

*ರಾಜಸ ದಾನ :*

**ಯತ್ತು ಪ್ರತ್ಯುಪಕಾರಾರ್ಥಂ ಫಲಮುದ್ದಿಶ್ಯ ವಾ ಪುನಃ ।**
**ದೀಯತೇ ಚ ಪರಿಕ್ಲಿಷ್ಟಂ ತದ್ರಾಜಸಮುದಾಹೃತಮ್ ॥ ೨೧ ॥**

*ತಾಮಸ ದಾನ :*


**ದೇಶಕಾಲೇ ಯದ್ದಾನಮಪಾತ್ರೇಭ್ಯಶ್ಚ ದೀಯತೇ ।**
**ಅಸತ್ಕೃತಮವಜ್ಞಾತಂ ತತ್ತಾಮಸಮುದಾಹೃತಮ್ ॥ ೨೨॥**

ಸಾತ್ವಿಕ ದಾನ ನಮ್ಮನ್ನು ಊರ್ಧ್ವಕ್ಕೆ ಕರೆದೊಯ್ಯುತ್ತದೆ, ರಾಜಸಿಕ ದಾನ ನಮ್ಮನ್ನು ಮಧ್ಯಮಾವಸ್ಥೆಯಲ್ಲಿಡುತ್ತದೆ, ತಾಮಸಿಕ ದಾನ ನಮ್ಮನ್ನು ಅಧೋಗತಿಗೊಯ್ಯುತ್ತದೆ. ಯಾವ ದಾನವು ಅದೇಶ ಮತ್ತು ಅಕಾಲಗಳಲ್ಲಿ ಅಪಾತ್ರರಿಗೆ ಸತ್ಕಾರವಿಲ್ಲದೆ, ತಿರಸ್ಕಾರದೊಡನೆ ಕೊಡಲ್ಪಡುವುದೋ ಅದು 'ತಾಮಸ ದಾನ'ವೆನಿಸುವುದು. ಆದರೆ ಯಾವುದು ಉಪಕಾರಕ್ಕೆ ಪ್ರತಿಯಾಗಿ ಅಥವಾ ಫಲವನ್ನು ಉದ್ದೇಶಿಸಿ ಕಷ್ಟದಿಂದ ಕೊಡಲ್ಪಡುವುದೋ ಅದು 'ರಾಜಸ ದಾನ'ವೆನಿಸುತ್ತದೆ. ಯಾವ ದಾನವು ಯಾವುದೇ ಉಪಕಾರವನ್ನೂ ಮಾಡದವನಿಗೆ, ಪರಿಗ್ರಹಿಸಲು ಯೋಗ್ಯನಾದವನಿಗೆ, ಒಳ್ಳೆಯ ದೇಶದಲ್ಲಿಯೂ, ಒಳ್ಳೆಯ ಕಾಲದಲ್ಲಿಯೂ ಕೊಡಲ್ಪಡುವುದೋ ಆ ದಾನವು 'ಸಾತ್ತ್ವಿಕ ದಾನ'ವೆನಿಸುತ್ತದೆ.

### ಭಾಗವತದಲ್ಲಿ

ಭಾಗವತದ ಅಷ್ಟಮಸ್ಕಂಧದಲ್ಲಿ ಬರುವ ಬಲಿಚಕ್ರವರ್ತಿಯ ದಾನ ಯಾರಿಗೆ ತಿಳಿಯದು ?

ವಾಮನಮೂರ್ತಿಯು ಬಲಿಚಕ್ರವರ್ತಿಯಿಂದ ದಾನವನ್ನು ಯಾಚಿಸುವಾಗ ಅವನ ಹೆಜ್ಜೆಯಲ್ಲಿ ಕೇವಲ ಮೂರು ಹೆಜ್ಜೆ


ಬಲಿ ಮತ್ತು ವಾಮನ

ಗಳಷ್ಟು ಭೂಮಿ ಕೊಟ್ಟರೆ ಸಾಕು ಎಂದು ಕೇಳುತ್ತಾ, ವಿದ್ವಾಂಸರಾದವರು ತಮ್ಮ ಆವಶ್ಯಕತೆಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರವೇ ದಾನವಾಗಿ ಪ್ರತಿಗ್ರಹಿಸಬೇಕು. ಹೀಗೆ ಮಾಡಿದರೆ ಅವರು ಪ್ರತಿಗ್ರಹದೋಷದಿಂದ ಮುಕ್ತರಾಗುತ್ತಾರೆ ಎನ್ನುತ್ತಾನೆ. ಅದಕ್ಕೆ ಪ್ರತಿಯಾಗಿ ಬಲಿಚಕ್ರವರ್ತಿ, ''ಬಾಲಬ್ರಹ್ಮಚಾರಿಯೇ, ಯಾವನೇ ಆಗಲಿ ನನ್ನನ್ನು ಯಾಚಿಸಲು ಬಂದಮೇಲೆ ಅವನು ಮತ್ತೆಲ್ಲಿಗೂ ಪುನಃ ಯಾಚಿಸಲು ಹೋಗಬಾರದು. ಆದ್ದರಿಂದ ನಿನ್ನ ಜೀವಿಕೆಗೆ ಬೇಕಾದಷ್ಟಾದರೂ ಫಲವತ್ತಾದ ಭೂಮಿಯನ್ನು ಯಾಚಿಸು'' ಎನ್ನುತ್ತಾನೆ. ಅದಕ್ಕುತ್ತರವಾಗಿ ವಾಮನ, 'ವಿತ್ತಂ ಯಾವತ್ಪ್ರಯೋ

ಜನಮ್'- ಧನ ಎಷ್ಟು ಬೇಕೋ ಅಷ್ಟನ್ನು ಮಾತ್ರ ಸಂಗ್ರಹಿಸ ಬೇಕು ಎನ್ನುತ್ತಾನೆ. ಸಂದರ್ಭವನ್ನು ಗ್ರಹಿಸಿದ ಬಲಿಯ ಗುರು ಶುಕ್ರಾಚಾರ್ಯರು, ಬಂದಿರುವವನು ಸಾಕ್ಷಾತ್ ಮಹಾವಿಷ್ಣು ಎಂದು ತಮ್ಮ ಶಿಷ್ಯನನ್ನು ಎಚ್ಚರಿಸುತ್ತಾ, ಯಾವ ದಾನದಿಂದ ದಾನ ಮಾಡಿದನಂತರ ಜೀವನ ನಿರ್ವಹಣೆಗೂ ಏನೂ ಉಳಿ ದಿರುವುದಿಲ್ಲವೋ, ಯಾಚಕನ ಸ್ಥಾನವನ್ನು ತಾನೇ ಹೊಂದ ಬೇಕಾದ ಪರಿಸ್ಥಿತಿ ಉಂಟಾಗುವುದೋ ಅಂತಹ ದಾನವನ್ನು ವಿದ್ವಾಂಸರು ಪ್ರಶಂಶಿಸುವುದಿಲ್ಲ ಎಂದು ಹೇಳುತ್ತಾರೆ. ಆದರೆ ಬಲಿಚಕ್ರವರ್ತಿ ಒಮ್ಮೆ ದಾನ ಮಾಡುವುದಾಗಿ ಮಾತು ಕೊಟ್ಟ ಮೇಲೆ ಅದನ್ನು ತಪ್ಪಿಸುವುದು ದೊಡ್ಡ ತಪ್ಪು ಎಂದು ಹೇಳುತ್ತಾ ಬಾಲವಟುವಿಗೆ ದಾನ ನೀಡಲು ಮುಂದಾಗುತ್ತಾನೆ. ಮುಂದಿನ ಕಥೆ ಸರ್ವವಿದಿತ.

### ಪುರಾಣಗಳಲ್ಲಿ

ಮತ್ಸ್ಯಪುರಾಣದಲ್ಲಿ,

**ಯದಾ ವಾ ಜಾಯತೇ ವಿತ್ತಂ ಚಿತ್ತಂ ಶ್ರದ್ಧಾಸಮನ್ವಿತಂ ।**
**ತದೈವ ದಾನ ಕಾಲಃ ಸ್ಯಾದ್ ಯತೋಽನಿತ್ಯಂ ಹಿ ಜೀವಿತಮ್ ॥**

ಎಂದರೆ ಯಾವಾಗ ಧನವಿರುವುದೋ, ಯಾವಾಗ ಮನ ದಲ್ಲಿ ದಾನ ಮಾಡಬೇಕೆಂಬ ಇಚ್ಛೆಯು ಉಂಟಾಗುವುದೋ ಅದನ್ನೇ ದಾನ ನೀಡಲು ಪ್ರಶಸ್ತವಾದ ಸಮಯವೆಂದು ತಿಳಿಯ ಬೇಕು. ಏಕೆಂದರೆ ಜೀವನವು ಅನಿತ್ಯವಾದುದು.

ಇದೇ ಭಾವವುಳ್ಳ ಸುಭಾಷಿತವೊಂದು ಹೀಗೆ ಹೇಳುತ್ತದೆ:

**ಯದೈವ ಜಾಯತೇ ಶ್ರದ್ಧಾ ಪಾತ್ರಂ ಸಂಪ್ರಾಪ್ಯತೇ ಯದಾ ।**
**ಸ ಏವ ಪುಣ್ಯಕಾಲಃ ಸ್ಯಾದ್ಯತಃ ಸಂಪತ್ತಿರಸ್ಥಿರಾ ॥**

ಎಂದರೆ, ಯಾವಾಗ ಶ್ರದ್ಧೆ ಉಂಟಾಗುವುದೋ ಮತ್ತು ಯಾವಾಗ ದಾನ ಸ್ವೀಕರಿಸಲು ಸತ್ಪಾತ್ರನು ದೊರಕುವನೋ ಅದೇ ದಾನ ನೀಡಲು ಪುಣ್ಯಕಾಲವಾಗಿದೆ. ಏಕೆಂದರೆ ಸಂಪತ್ತು ಅಸ್ಥಿರವಾದುದು.

ಹೀಗೆ ವೇದ, ವೇದಾಂತ, ಇತಿಹಾಸ, ಪುರಾಣ, ಗೀತೆ ಇವು ಗಳಲ್ಲಿ 'ದಾನ' ದ ಮಹತ್ವವನ್ನು ಇಷ್ಟೊಂದು ಕೊಂಡಾಡಿರು ವಾಗ, ನಮ್ಮ ನಿತ್ಯ ಜೀವನದಲ್ಲೂ ಇದನ್ನು ಅಳವಡಿಸಿಕೊಳ್ಳ ಬೇಕೆಂಬುದನ್ನು ದೃಢಪಡಿಸಿದಂತಾಯಿತಲ್ಲವೆ? ನಿತ್ಯ ಜೀವನದ ರೀತಿ ನೀತಿಗಳನ್ನು ಸರಳಸುಂದರವಾಗಿ ನಮ್ಮ ದಾಸವರೇಣ್ಯರೂ ಹಾಡಿದ್ದಾರೆ :

೧. ದಾನದ ಮಹತ್ತ್ವವನ್ನು ತಿಳಿಸುವ ಕಬೀರದಾಸರ ದೋಹೆ ಹೀಗಿದೆ:

**ಲೇನೇಕೊ ಹರಿನಾಮ್ । ದೇನೇಕೊ ಅನ್ನಪಾನ್ ।**
**ತರನೇ ಕೊ ಲೀನತಾ । ಡುಬನೇಕೊ ಅಭಿಮಾನ್ ।**
**ಪಾಣೆಭರೆ ನಾವಮೆ । ದಾಮ ಭರೇ ಧಾಮಮೆ ।**
**ದೋವು ಹಾಥಮೆ ಕರೋ ದಾನ್- ಮಿಲೇಗಾ ರಾಮ್ ॥**

ಸ್ವೀಕರಿಸಲು ಯೋಗ್ಯವಾದುದು ಶ್ರೀಹರಿಯ ನಾಮ, ಕೊಡಲು ಯೋಗ್ಯ ದಾನವೆಂದರೆ ಅನ್ನದಾನ, ಭವಸಾಗರ ದಾಟಲು ಶ್ರೀಹರಿನಾಮದಲ್ಲಿ ತಲ್ಲೀನತೆ, ಭವದಲ್ಲಿ ಮುಳುಗಿ ಹೋಗಲು ಕಾರಣ ದೇಹಾಭಿಮಾನ. ನದಿ ದಾಟುವಾಗ ದೋಣಿ ಯಲ್ಲಿ ನೀರು ತುಂಬಿದರೆ ಹೇಗೆ ಎರಡೂ ಕೈಯಿಂದ ನೀರನ್ನು ಎತ್ತಿ ಎತ್ತಿ ಹೊರಚೆಲ್ಲುತ್ತೇವೆಯೋ ಹಾಗೆಯೇ ಮನೆಯಲ್ಲಿ ಸಂಪತ್ತು ತುಂಬಿದಾಗ ಅದನ್ನು ಎರಡೂ ಕೈಯಿಂದ ಎತ್ತಿ ಎತ್ತಿ ದೀನರಿಗೆ ದಾನ ಕೊಡು. ಆಗ ನಿನಗೆ ಶ್ರೀರಾಮನು ದೊರಕು ತ್ತಾನೆ ಎನ್ನುತ್ತಾರೆ ಕಬೀರರು.


೨. ಶ್ರೀಕನಕದಾಸರು ದಾನದ ಮಹಿಮೆಯ ಬಗ್ಗೆ ಹೀಗೆ ಹಾಡುತ್ತಾರೆ :

**ಏನು ಇಲ್ಲದ ಎರಡು ದಿನದ ಸಂಸಾರ**
**ಜ್ಞಾನದಲಿ ದಾನಧರ್ಮವ ಮಾಡಿರಯ್ಯ**
**ಹಸಿದು ಬಂದವರಿಗೆ ಅಶನವೀಯಬೇಕು**
**ಶಿಶುವಿಗೆ ಪಾಲ್ಬೆಣ್ಣೆಯುಣಿಸಬೇಕು**
**ಹಸನಾದ ಭೂಮಿಯನು ಧಾರೆಯೆರೆಯಲು ಬೇಕು**
**ಪುಸಿಯಾಡದಲೆ ಭಾಷೆ ನಡೆಸಲೇಬೇಕು**

ಹೀಗೆ ಎಲ್ಲರಿಂದಲೂ ಸ್ತುತಿಸಲ್ಪಟ್ಟ ಈ ದಾನದ ಮಹಿಮೆ ಯನ್ನು ತಿಳಿಸುವ ಕೆಲವು ಕಥೆಗಳನ್ನು ಸ್ಮರಿಸೋಣ :

### ಕೈಯೆತ್ತಿ ದಾನ ನೀಡಲು ಶಿಕ್ಷಣ

ಶ್ರೀರಾಮಭಕ್ತರಾದ ಸಮರ್ಥ ರಾಮದಾಸರು ಭಿಕ್ಷೆಗಾಗಿ ಒಬ್ಬ ಗೃಹಸ್ಥರ ಮನೆಗೆ ಬರುತ್ತಾರೆ. ಆ ಮನೆಯೊಡತಿ 'ಏನೂ ಇಲ್ಲ ಮುಂದಕ್ಕೆ ಹೋಗು' ಎನ್ನುತ್ತಾಳೆ. ಶ್ರೀ ಸಮರ್ಥರು 'ತಾಯೇ, ಹಾಗೆ ಇಲ್ಲ ಎಂದು ಹೇಳಬೇಡ. ನಿನ್ನ ಮನೆಯಂಗ



ಳದ ಒಂದು ಹಿಡಿ ಮಣ್ಣನ್ನು ತೆಗೆದು ಕೈಯೆತ್ತಿ ನನ್ನ ಭಿಕ್ಷಾಪಾತ್ರೆಯಲ್ಲಿ ಹಾಕು. ನಾನು ಅಷ್ಟರಲ್ಲೇ ತೃಪ್ತನಾಗುತ್ತೇನೆ' ಎಂದಾಗ ಆಕೆ, 'ಎಷ್ಟು ಹಿಡಿ ಮಣ್ಣು ಬೇಕೋ ಅಷ್ಟನ್ನು ನೀನೇ ತೆಗೆದುಕೊಂಡು ಹೋಗು'ಎಂದಳು. ಅದಕ್ಕೆ ಸಮರ್ಥರು 'ತಂಗಿ, ನಿನ್ನ ಕೈಗೆ ದಾನಕೊಟ್ಟು ಅಭ್ಯಾಸವಾಗಬೇಕು. ಅದಕ್ಕಾಗಿ ನೀನೇ ಒಂದು ಹಿಡಿ ಮಣ್ಣನ್ನು ನಿನ್ನ ಕೈಯಿಂದ ಎತ್ತಿಕೊಡು. ಈಗಲೇ ನೀನು ಕೈಯೆತ್ತಿ ಕೊಡುವ ಅಭ್ಯಾಸ ಮಾಡದಿದ್ದರೆ ಮುಂದೆ ನೀನು ಶ್ರೀಮಂತಳಾದಾಗ ಕೊಡಲು ಬೇಕಾದಷ್ಟಿದ್ದರೂ, ಇದುವರೆಗೂ 'ಇಲ್ಲ' ಎಂದು ಹೇಳುವುದೇ ಅಭ್ಯಾಸವಾಗಿರುವುದರಿಂದ ಆಗಲೂ ನೀನು 'ಏನೂ ಇಲ್ಲ ಮುಂದಕ್ಕೆ ಹೋಗು' ಎಂದೇ ಹೇಳಬಹುದು. ಆದ್ದರಿಂದ ನಿನಗೆ ದಾನ ಕೊಡುವ ಅಭ್ಯಾಸವಾಗಲಿ ಎಂದು ಮಣ್ಣನ್ನಾದರೂ ಕೊಡು ಎಂದು ಹೇಳಿದೆ' ಎಂದರಂತೆ !

### ಬಹು ದೊಡ್ಡ ದಾನ

ಪಟ್ಟನ ಎಂಬ ಸಾಮ್ರಾಜ್ಯದ ಮಹಾಮಂತ್ರಿ ಉದಯನನ ಪುತ್ರ ಬಾಹಡ ಜೈನರ ಶತ್ರುಂಜಯ ತೀರ್ಥದ ಪುನರುದ್ಧಾರದ ಕಾರ್ಯ ಮಾಡಿ ದಿವಂಗತ ತಂದೆಯವರ ಅಪೂರ್ಣ ಇಚ್ಛೆಯನ್ನು ಪೂರ್ಣಗೊಳಿಸಲು ಬಯಸಿದನು. ತೀರ್ಥೋದ್ಧಾರದ ಕಾರ್ಯ ಪ್ರಾರಂಭವಾಗುತ್ತಲೇ ರಾಜ್ಯದ ಪ್ರಜೆಗಳು ಮಹಾಮಂತ್ರಿಗಳನ್ನು ಕುರಿತು, 'ತಾವು ಸಮರ್ಥರು. ಆದರೆ ನಮಗೂ ಈ ಪುಣ್ಯಕಾರ್ಯದಲ್ಲಿ ಪಾಲ್ಗೊಳ್ಳಲು ಅವಕಾಶವನ್ನು ಪ್ರದಾನಿಸಿ' ಎಂದು ಪ್ರಾರ್ಥಿಸಿದರು.

ಪ್ರಜಾಜನರ ಪ್ರಾರ್ಥನೆಯನ್ನು ಸ್ವೀಕರಿಸಲಾಯಿತು. ಎಲ್ಲರೂ ಅವರವರ ಶ್ರದ್ಧೆ ಹಾಗೂ ಶಕ್ತ್ಯನುಸಾರ ಧನವನ್ನು ತಂದು ಒಪ್ಪಿಸಿದರು. ತೀರ್ಥದ ಉದ್ಧಾರಕಾರ್ಯ ಮುಗಿಯುತ್ತಲೇ ಆರ್ಥಿಕ ಸಹಾಯ ನೀಡಿದ ಎಲ್ಲ ಮಹನೀಯರ ಹೆಸರುಗಳನ್ನು ಘೋಷಿಸಲಾಯಿತು. ಲಕ್ಷ ಲಕ್ಷ ಮುದ್ರೆಗಳ ದಾನ ನೀಡಿದವರು ಚಕಿತರಾದರು. ಕಾರಣ ಆ ಪಟ್ಟಿಯಲ್ಲಿ ಮೊದಲ ಹೆಸರು ಭೀಮ ಎಂಬ ಮಜೂರಿ ಕೆಲಸ ಮಾಡುವವನದಾಗಿತ್ತು. ಅವನು ನೀಡಿದ್ದ ಕಾಣಿಕೆ ಕೇವಲ ಏಳು ಪೈಸೆ!

ಮಹಾಮಂತ್ರಿಗಳಿಗೆ ಇತರ ದಾನಿಗಳ ಅಸಮಾಧಾನ ಅರಿವಿಗೆ ಬಂತು. ಒಡನೆಯೇ ಅವರು ''ಸೋದರರೇ, ನಾನು ಹಾಗೂ ತಾವೆಲ್ಲರೂ ತೀರ್ಥದ ಉದ್ಧಾರಕ್ಕಾಗಿ ದಾನರೂಪದಲ್ಲಿ ಕೊಟ್ಟಿರುವ ಹಣ ನಮ್ಮಲ್ಲಿರುವ ಧನದ ಕೇವಲ ಒಂದು ಭಾಗ ಮಾತ್ರ. ಆದರೆ ಈ ಕೂಲಿ ಆಳು ಅನೇಕ ದಿನಗಳು ಪರಿಶ್ರಮಪಟ್ಟು ದುಡಿದು ಉಳಿಸಿದ್ದ ಏಳು ಪೈಸೆಗಳನ್ನು ಕೊಟ್ಟು ತನ್ನ ಸರ್ವಸ್ವವನ್ನೂ ದಾನ ಮಾಡಿದ್ದಾನೆ. ಅವನು ನೀಡಿರುವ ದಾನವೇ ಎಲ್ಲರಿಗಿಂತ ದೊಡ್ಡ ದಾನವಾಗಿದೆ. ಈ ರೀತಿ ನಿರ್ಣಯ ಮಾಡಿರುವ ನನ್ನಿಂದ ಯಾವ ಅಪಚಾರವೂ ಆಗಿಲ್ಲವಷ್ಟೆ?'' ಎಂದು ಕೇಳಿದರು.

ಇದನ್ನು ಕೇಳಿ ಎಲ್ಲರೂ ತಲೆತಗ್ಗಿಸಿದರು. ಈ ನಿರ್ಣಯಕ್ಕೆ ವಿರುದ್ಧವಾಗಿ ಮಾತನಾಡುವ ಒಬ್ಬ ವ್ಯಕ್ತಿಯೂ ಇರಲಿಲ್ಲ!

### ಪಂಜಾಬ್ ಕೇಸರಿಯ ಉದಾರ ದಾನ

ಪಂಜಾಬ್ ಕೇಸರಿ ಎಂದು ವಿಖ್ಯಾತರಾಗಿದ್ದ ಮಹಾರಾಜ ರಣಜಿತ್ ಸಿಂಹರು ಒಮ್ಮೆ ನಡೆದುಕೊಂಡು ಬರುತ್ತಿದ್ದಾಗ ಎಲ್ಲಿಂದಲೋ ಬಂದ ಇಟ್ಟಿಗೆಯ ತುಂಡೊಂದು ಅವರಿಗೆ ಬಡಿಯಿತು. ಅವರಿಗೆ ಗಾಯವಾಗಿ ಬಹಳ ತೊಂದರೆಯಾಯಿತು. ರಾಜನ ಸಂಗಡಿಗರು ಒಡನೆಯೇ ಓಡಿಹೋಗಿ ಕಲ್ಲು ಬೀರಿದ ಮುದುಕಿಯೊಬ್ಬಳನ್ನು ಹಿಡಿದು ತಂದು ರಾಜನ ಮುಂದೆ ನಿಲ್ಲಿಸಿದರು. ಆ ಮುದುಕಿಯು ಭಯದಿಂದ ನಡುಗುತ್ತಿದ್ದಳು. ಅವಳು ಮಹಾರಾಜರಿಗೆ ಕೈಮುಗಿದು, ''ಸರ್ಕಾರ್, ನನ್ನ ಮಗು ಮೂರುದಿನಗಳಿಂದ ತಿನ್ನಲು ಏನೂ ಇಲ್ಲದೆ ಉಪವಾಸವಿದೆ. ನಾನು ಈ ಮರದಲ್ಲಿ ಕಳಿತ ಬೇಲದ ಹಣ್ಣುಗಳನ್ನು ನೋಡಿ ಅದನ್ನು ಉದುರಿಸಿ ಮಗುವಿಗೆ ಕೊಡಲು ಇಟ್ಟಿಗೆಯ ತುಂಡೊಂದನ್ನು ಎಸೆದೆ. ದುರ್ಭಾಗ್ಯವಶಾತ್ ಅದು ನಿಮಗೆ ತಗುಲಿತು. ನಾನು ನಿರ್ದೋಷಿ



ಮಹಾರಾಜ ರಣಜಿತ್ ಸಿಂಹ

ಸರ್ಕಾರ್. ನಾನು ಕಲ್ಲು ಹೊಡೆದುದು ನಿಮಗಲ್ಲ ನನ್ನನ್ನು ಕ್ಷಮಿಸಿ'' ಎಂದು ಗೋಗರೆದಳು. ರಾಜಾ ರಣಜಿತ್‌ಸಿಂಹರು ತನ್ನ ಸೇವಕರನ್ನು ಕುರಿತು, ಈ ವೃದ್ಧೆಗೆ ಒಂದು ಸಾವಿರ ರೂಪಾಯಿ ಹಣವನ್ನೂ, ಅವರಿಗೆ ಊಟಕ್ಕೆ ಬೇಕಾಗುವ ಪದಾರ್ಥವನ್ನೂ ಕೊಟ್ಟು ''ಆದರಪೂರ್ವಕವಾಗಿ ಮನೆಗೆ ತಲುಪಿಸಿ ಬನ್ನಿ'' ಎಂದು ಹೇಳಿದರು. ಆಗ ಅವನ ಸೈನಿಕರು, ''ಸರ್ಕಾರ್, ಇದೇನು ಮಾಡುತ್ತಿದ್ದೀರಿ? ಈಕೆಯಾದರೋ ನಿಮಗೆ ಕಲ್ಲಿನಿಂದ ಹೊಡೆದು ನೋವುಂಟುಮಾಡಿದ್ದಾಳೆ. ಇವಳಿಗೆ ಕಠೋರ ದಂಡನೆ

ಯಾಗಬೇಕು'' ಎಂದು ಹೇಳಿದಾಗ, ರಾಜಾ ರಣಜಿತ್‌ಸಿಂಹರು ''ಸೋದರರೇ, ಪ್ರಾಣ ಬುದ್ಧಿ ಎರಡೂ ಇಲ್ಲದ ಈ ಬೇಲದ ವೃಕ್ಷ ಕಲ್ಲಿನಿಂದ ಹೊಡೆದಾಗ ಮಧುರ ಫಲವನ್ನು ಕೊಡುವಾಗ, ಪ್ರಾಣ ಬುದ್ಧಿ ಎರಡೂ ಇರುವ ನಾನು ಈಕೆಗೆ ದಂಡನೆ ಕೊಡಲು ಹೇಗೆ ಸಾಧ್ಯ?'' ಎಂದರು!

### 'ಧರ್ಮರಾಜ – ಬಲಿ ಚಕ್ರವರ್ತಿ'

ರಾಜಸೂಯ ಯಜ್ಞವನ್ನು ಮಾಡಿದ ಧರ್ಮರಾಜನಿಗೆ ಒಂದು ಸಾತ್ವಿಕ ಅಹಂಕಾರ ಉಂಟಾಗಿತ್ತಂತೆ. ಯಜ್ಞದಲ್ಲಿ ತಾನು ಮಾಡಿದ ದಾನ ಧರ್ಮವನ್ನು ಕುರಿತು ಶ್ರೀಕೃಷ್ಣನಲ್ಲಿಯೂ ಹೇಳಿಕೊಂಡಿದ್ದ. ಒಮ್ಮೆ ಶ್ರೀಕೃಷ್ಣ ಪರಮಾತ್ಮ ಧರ್ಮರಾಜನನ್ನು ಕರೆದುಕೊಂಡು ಸುತಲಾಧಿಪತಿಯಾದ ಬಲಿ ಚಕ್ರವರ್ತಿಯ ಬಳಿಗೆ ಕರೆತಂದ. ಆಗ ಬಲಿಯು, ''ಹೇ ಭಗವನ್! ನೀನೊಬ್ಬನೇ ಬರಬಹುದಾಗಿತ್ತಲ್ಲಾ! ಈ ದರಿದ್ರ ರಾಜನನ್ನು ಏಕೆ ಕರೆತಂದೆ?'' ಎನಲು ಶ್ರೀಕೃಷ್ಣನು, ''ಹೇ ಬಲಿ ಚಕ್ರವರ್ತಿಯೆ! ನೀನು ಇವನನ್ನು ದರಿದ್ರನೆಂದು ಕರೆದುದು ಸರಿಯಲ್ಲ. ಇವನ ಹೆಸರು ಧರ್ಮರಾಜ! ರಾಜಸೂಯ ಯಾಗದಲ್ಲಿ ಲಕ್ಷ ಲಕ್ಷ ಬ್ರಾಹ್ಮಣರಿಗೆ ಅಶನ ವಸನ ಭೂಷಣಾದಿಗಳನ್ನು ಕೊಟ್ಟು ಈತ ಸತ್ಕರಿಸಿದ್ದಾನೆ'' ಎಂದನು. ಆಗ ಬಲಿಯು, ''ಹೇ ಕೃಷ್ಣ! ಅದಕ್ಕೇ ನಾನು ಇವನನ್ನು ದರಿದ್ರ ರಾಜ ಎಂದು ಕರೆದದ್ದು! ನನ್ನ ರಾಜ್ಯದಲ್ಲಿರುವ ಬ್ರಾಹ್ಮಣರನ್ನು ನಾನು ವರ್ಷಕ್ಕೊಮ್ಮೆ ಬಂದು ನನ್ನ ಅರಮನೆಯ ಸತ್ಕಾರ ಸನ್ಮಾನ ಸ್ವೀಕರಿಸಬೇಕೆಂದು ಎಷ್ಟು ಬೇಡಿಕೊಂಡರೂ ಅವ



ರಾರೂ ಪರಾನ್ನಕ್ಕಾಗಲಿ ಪರವಸ್ತುವಿಗಾಗಲಿ ಅಪೇಕ್ಷೆಪಡುವುದಿಲ್ಲ. ಅದರಿಂದ ತಾವು ಪುಣ್ಯಕ್ಷೀಣರಾಗುತ್ತೇವೆ ಎಂದು ಹೇಳುತ್ತಾರೆ! ಈ ಧರ್ಮರಾಜನ ರಾಜ್ಯದಲ್ಲಿ ಕರೆದಾಕ್ಷಣ ಲಕ್ಷಾಂತರ ಬ್ರಾಹ್ಮಣರು ಓಡಿಬರುತ್ತಾರಾದರೆ ಅವರು ಹೊಟ್ಟೆಗೂ ಬಟ್ಟೆಗೂ ಇರದೆ ತತ್ತರಿಸುವರೆಂಬುದು ಸತ್ಯ. ಯಾವಾತನ ರಾಜ್ಯದಲ್ಲಿ ಜ್ಞಾನಿಗಳು ಇಂತಹ ದುರವಸ್ಥೆಯಲ್ಲಿರುವರೋ, ಆ ದೇಶದ ರಾಜನು ದರಿದ್ರನಲ್ಲದೆ ಮತ್ತೇನು?'' ಎಂದಾಗ ಧರ್ಮರಾಜ ನಾಚಿದನಂತೆ.

### ಪುರೋಹಿತರಿಗೆ ಅಶ್ವದಾನ !

ಒಂದು ಊರಿನಲ್ಲಿ ಒಬ್ಬ ಶ್ರೀಮಂತನಿಗೆ ಷಷ್ಟ್ಯಬ್ದಪೂರ್ತಿ ಸಮಾರಂಭವು ನಡೆದಾಗ, ಕುಲಪುರೋಹಿತರಿಗೆ ಏನು ದಾನ ಕೊಡಲಿ ಎಂಬ ವಿಚಾರ ಬಂದಾಗ ತನ್ನ ಪತ್ನಿಯನ್ನು ಕೇಳಿದ. ಅವಳು ''ನೋಡ್ರೀ, ನಮ್ಮ ಪುರೋಹಿತರಿಗೆ ಒಂದು ಒಳ್ಳೆಯ ವಸ್ತು ದಾನ ಕೊಡಬೇಕು, ಅವರು ಅದನ್ನು ಉಪಯೋಗಿಸುವಾಗಲೆಲ್ಲಾ ನಮ್ಮ ನೆನಪು ಮಾಡಿಕೊಳ್ಳುವಂತಿರಬೇಕು'' ಎಂದಾಗ ಯಜಮಾನ, ''ನಮ್ಮಲ್ಲಿ ಒಂದು ಕುದುರೆ ಇದೆ ಯಲ್ಲಾ ಅದನ್ನು ದಾನ ಮಾಡೋಣ. ಎಲ್ಲರೂ ಭೂದಾನ, ಗೋದಾನ ಮಾಡುತ್ತಾರೆ, ನಾವು ಅಶ್ವದಾನ ಮಾಡೋಣ. ಅವರು ಅದರ ಮೇಲೆ ಕುಳಿತು ಮದುವೆ, ಮುಂಜಿ, ಶ್ರಾದ್ಧ ಮುಂತಾದ ಕಾರ್ಯಗಳಿಗೆ ಹೋಗುವಾಗ ನಮ್ಮನ್ನು ಜ್ಞಾಪಿಸಿಕೊಳ್ಳುತ್ತಾರೆ'' ಎಂದ. ಸಹಸ್ರಾರು ಜನರು ನೋಡುತ್ತಿದ್ದಂತೆಯೇ ಈ ದಂಪತಿಗಳು ಪುರೋಹಿತರಿಗೆ ಅಶ್ವದಾನ ಮಾಡಿದರು. ಭಟ್ಟರಿಗೋ ಬಹಳ ಹಿಗ್ಗು. 'ನನ್ನ ಜಾತಕದಲ್ಲಿ ಅಶ್ವಾರೋಹಣ ಯೋಗವಿದ್ದರೆ ಯಾರು ತಪ್ಪಿಸುತ್ತಾರೆ?' ಎಂದುಕೊಂಡರು. ಬಳಿಕ ಇತರ ದಾನ ದಕ್ಷಿಣೆ ನಡೆದ ಮೇಲೆ ಯಜಮಾನ, ''ಪುರೋಹಿತರೇ, ನೀವು ಕುದುರೆಯ ಮೇಲೆ ಕುಳಿತು ಹೋಗುವುದನ್ನು ನಾವು ಕಣ್ತುಂಬ ನೋಡಿ ಸಂತೋಷಪಡಬೇಕು'' ಎಂದು ಹೇಳಿದಾಗ ಅವರಿವರು ಸಹಾಯ ಮಾಡಿದ ಮೇಲೆ ಪುರೋಹಿತರು ಕುದುರೆಯನ್ನೇರಿ ಕುಳಿತು ಗಂಭೀರವಾಗಿ ಪ್ರಯಾಣ ಬೆಳೆಸಿದರು. ಲಗಾಮು ಹಿಡಿದು ಅದನ್ನು ನಡೆಸಲರಿಯದ ಭಟ್ಟರು ಸವಾರಿ ಮಾಡಲೂ ಬಾರದೆ ಇಳಿಯಲೂ ಬಾರದೆ ಪಟ್ಟ ಬವಣೆ ಅಷ್ಟಿಷ್ಟಲ್ಲ. ಕುದುರೆ ಅದಕ್ಕೆ ತೋಚಿದ ಕಡೆ ಹೊಲ, ಗದ್ದೆ, ಹಳ್ಳ ಕೊಳ್ಳ, ಬೆಟ್ಟ ತಿಟ್ಟು ಹತ್ತಿ ಇಳಿಯುತ್ತಿದ್ದರೆ ಭಟ್ಟರ ಪ್ರಾಣ ಕುತ್ತಿಗೆಗೆ ಬರುತ್ತಿತ್ತು. ದಾನ ಮಾಡಿದ ಯಜಮಾನನನ್ನು ಪ್ರತಿಕ್ಷಣ ಜ್ಞಾಪಿಸಿಕೊಳ್ಳುತ್ತಾ ಶಪಿಸುತ್ತಿದ್ದರಂತೆ! ಕೊನೆಗೆ ಯಾರೋ ಕನಿಕರಗೊಂಡು ಕುದುರೆಯನ್ನು ಹಿಡಿದು ನಿಲ್ಲಿಸಿ ಭಟ್ಟರನ್ನು ಮನೆಗೆ ತಲುಪಿಸಿದರಂತೆ!

ಈ ಎಲ್ಲ ಕಥೆಗಳು ದಾನದ ಮಹಿಮೆಯನ್ನು ವಿವಿಧ ರೀತಿಯಲ್ಲಿ ಕೊಂಡಾಡಿವೆಯಲ್ಲವೆ?

ಕಡೆಯದಾಗಿ 'ಮನುಸ್ಮೃತಿ'ಯಲ್ಲಿ ಬರುವ ಶ್ಲೋಕದೊಂದಿಗೆ ದಾನ ಮಹಿಮೆಗೆ ಮಂಗಳ ಹಾಡೋಣ.

**ತಪಃ ಪರಂ ಕೃತಯುಗೇ ತ್ರೇತಾಯಾಂ ಜ್ಞಾನಮುಚ್ಯತೇ ।**
**ದ್ವಾಪರೇಯಜ್ಞಮೇವಾಹುರ್ದಾನಮೇಕಂ ಕಲೌಯುಗೇ ॥**

'ಕೃತಯುಗದಲ್ಲಿ ತಪಸ್ಸು, ತ್ರೇತಾಯುಗದಲ್ಲಿ ಜ್ಞಾನಾರ್ಜನೆ, ದ್ವಾಪರದಲ್ಲಿ ಯಜ್ಞಯಾಗಾದಿಗಳು ಹಾಗೂ ಕಲಿಯುಗದಲ್ಲಿ ದಾನವೇ ಮಾನವಕಲ್ಯಾಣದ ಸಾಧನವಾಗಿದೆ.'

*ಗ್ರಂಥ ಋಣ :*

*೧. ಮಹಭಾರತ ಸಂಪುಟಗಳು, ಭಾರತ ದರ್ಶನ ಪ್ರಕಾಶನ, ಬೆಂಗಳೂರು*

*೨. ಹರಿಕಥಾಮೃತ ಸಿಂಧು, ಭದ್ರಗಿರಿ ಅಚ್ಯುತದಾಸರು*

*೩. ಋಗ್ವೇದಸೂಕ್ತಸಾರ, ಸೂರ್ಯನಾರಾಯಣ,ಕಲ್ಲಹಳ್ಳಿ, ಬೆಂಗಳೂರು-೮೨*